Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in principal@klsvdit.edu.in**

Date: 12-09-2022

**ಪತ್ರಿಕಾ ಪ್ರಕಟಣೆ:**

# ಕೆ.ಎ.ಎಸ್. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ರಶ್ಮಿ ಜಕಾತಿ ಅವರಿಗೆ ಸನ್ಮಾನ

2020–21ನೇ ಸಾಲಿನ ಕರ್ನಾಟಕ ಆಡಳಿತ ಸೇವಾ (ಕೆ.ಎ.ಎಸ್) ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ ಕುಮಾರಿ. ರಶ್ಮಿ ಜಕಾತಿ ಅವರನ್ನು ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದಲ್ಲಿ ಸೆಪ್ಟೆಂಬರ್ 12 ರಂದು ಸನ್ಮಾನಿಸಲಾಯಿತು.ಕುಮಾರಿ. ರಶ್ಮಿ ಅವರು ಸಭಿಕರನ್ನುದ್ದೇಶಿಸಿ ಮಾತನಾಡುತ್ತಾ " ಕೆ.ಎ.ಎಸ್. ಪರೀಕ್ಷೆಗೆ ತಾವು ನಡೆಸಿದ ಪೂರ್ವಸಿದ್ಧತೆಯ ಹಿಂದಿನ ಶ್ರಮವನ್ನು ವಿವರಿಸಿದರು. ತಂದೆ–ತಾಯಿಯರ ನಿರಂತರ ಪ್ರೋತ್ಸಾಹ ಹಾಗೂ ಸಹಕಾರದ ಫಲವೇ ಈ ಸಾಧನೆಯೆಂದು ಹೇಳಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಕೆ.ಎ.ಎಸ್. ನಂತಹ ಪರೀಕ್ಷೆಗಳನ್ನು ಎದುರಿಸಲು ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಯನ್ನು ತಿಳಿಸಿದರು. ಸಾಧನೆಯ ಹಾದಿಯಲ್ಲಿ ಗುರುವಿನ ಮಾರ್ಗದರ್ಶನ ಅತ್ಯಮೂಲ್ಯವಾಗಿದ್ದು, ವಿದ್ಯಾರ್ಥಿಗಳು ಗುರುಗಳಿಗೆ ಗೌರವ ನೀಡಬೇಕೆಂದು ಹೇಳಿದರು. ಮಹಾವಿದ್ಯಾಲಯದಲ್ಲಿ ತಾವು ಕಳೆದ ಅತ್ಯಮೂಲ್ಯ ನಾಲ್ಕು ವರ್ಷಗಳ ಸುಮಧುರ ಕ್ಷಣಗಳನ್ನು ನೆನಪಿಸಿಕೊಳ್ಳುತ್ತಾ, ಈ ವಿದ್ಯಾಲಯಕ್ಕೆ ಆಭಾರಿಯಾಗಿದ್ದೇನೆ ಎಂದು ಹೇಳಿದರು. ಸಾಧಕಿ ರಶ್ಮಿ ಅವರ ತಂದೆಯವರಾದ ಶ್ರೀ. ಶಂಕರ್ ಎಸ್ ಜಕಾತಿ ಅವರು ಮಾತನಾಡಿ, ಪುತ್ರಿಯ ಈ ಸಾಧನೆ ತಮ್ಮ ವಂಶದ ಕೀರ್ತಿಯನ್ನು ಇಮ್ಮಡಿಗೊಳಿಸಿದೆ ಎಂದು ಹರ್ಷ ವ್ಯಕ್ತ ಪಡಿಸಿದರು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ವಿ.ಎ.ಕುಲಕರ್ಣಿಯವರು ಕಠಿಣ ಪರಿಶ್ರಮ, ನಿಷ್ಠೆ,ಬದ್ಧತೆಯಿಂದ ನಮ್ಮ ಮಹಾವಿದ್ಯಾಲಯದ ಹೆಮ್ಮೆಯ ವಿದ್ಯಾರ್ಥಿನಿ ಕೆ. ಎ. ಎಸ್. ನಂತಹ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುವುದು ಅತೀವ ಸಂತಸದ ವಿಷಯವೆಂದು ಹೇಳಿದರು. ವಿದ್ಯಾರ್ಥಿಗಳು ರಶ್ಮಿ ಅವರ ಸಾಧನೆಯನ್ನು ಪ್ರೋತ್ಸಾಹವಾಗಿಟ್ಟುಕೊಂಡು ಐ.ಎ.ಎಸ್, ಕೆ.ಎ.ಎಸ್. ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋರಬೇಕೆಂದು ಕರೆ ನೀಡಿದರು.

ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿಯವರಾದ ರಶ್ಮಿ ಅವರು,2011 ರಿಂದ 2015ರ ವರೆಗೆ ವಿ.ಡಿ.ಐ.ಟಿ. ಯ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದಲ್ಲಿ ವ್ಯಾಸಂಗ ಮಾಡಿದ್ದರು. ಕೆ.ಎ.ಎಸ್ ಪರೀಕ್ಷೆಯಲ್ಲಿ 889 ಅಂಕಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದ್ದಾರೆ.ಮಹಾವಿದ್ಯಾಲಯದ ಆಡಳಿತ ಮಂಡಳಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳ ವತಿಯಿಂದ ಸಾಧಕಿ ರಶ್ಮಿ ಹಾಗೂ ಅವರ ತಂದೆಯವರಿಗೆ ಸನ್ಮಾನಿಸಲಾಯಿತು.ರಶ್ಮಿ ಜಕಾತಿ ಯವರು ಜೀವನದಲ್ಲಿ ಉನ್ನತ ಸ್ಥಾನ ಹಾಗೂ ಯಶಸ್ಸುಗಳಿಸಲಿ ಎಂದು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ವಿನಾಯಕ ಲೋಕುರ್ ಅವರು ಆಶಿಸಿದ್ದಾರೆ.

ಪ್ರೊ. ಪ್ಲಾಸಿನ್ ಡಿ ಸ್ವಾಗತಿಸಿದರು. ಡೀನ್ ಎಫ್. ಐ. ಐ. ಐ. ಪ್ರೊ.ಸುಧೀರ್ ಕುಲಕರ್ಣಿ ವಂದಿಸಿದರು. ಪ್ರೊ. ವಿನಯ್ ಚಿತಾರೆ ನಿರೂಪಿಸಿದರು. ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಗಳು ಹಾಗೂ 80ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಶ್ಮಿ ಅವರಿಗೆ ಶುಭ ಹಾರೈಸಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ವತಿಯಿಂದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal


KLS VDIT


KLS
KARNATAK LAW SOCIETY's